
ಯುಗಾದಿ ಪ್ರಬಂಧ ಸ್ಪರ್ಧೆ 2024

ತೀರ್ಪುಗಾರರು ಮೆಚ್ಚಿದ ಪ್ರಬಂಧ

◆ ಡಾ. ಪ್ರೇಮಲತ ಬಿ.
ಕಲೆ: ಸಂತೋಷ್ ಸಸಿಹಿತ್ಲು



# ಪರಿವರ್ತನೆ

ಹೊಟ್ಟೆಯಲ್ಲಿ ಅದೊಂದು ತರಹದ ತಳಮಳ ಶುರುವಾಗಿತ್ತು. ನನಗೆ ಹೀಗೆ ಪ್ರತಿಬಾರಿ ಆಗುತ್ತದೆ. ಈ ಬಾರಿ ಭಾರತಕ್ಕೆ ಹೊರಟು ನಿಂತಾಗಲೂ ಹಾಗೇ ಆಯ್ತು.

ಈ ಖಂಡಾಂತರ ಪ್ರಯಾಣದಲ್ಲಿ ಜರುಗುವ ದೇಹ—ಮನಸ್ಸುಗಳ ಸ್ಥಳಾಂತರ ಮತ್ತು ಪರಿವರ್ತನೆಯ ಕ್ರಿಯೆ ಇದೆಯಲ್ಲ, ಅದು ಬಲು ಮಾಯಕದ್ದು.

ನೇರವಾಗಿ ಬೆಂಗಳೂರಿಗೆ ಹಾರಬೇಕೆಂದರೆ ಬ್ರಿಟಿಷ್ ಏರ್‌ಲೈನ್ಸ್ ಅವಲಂಬನೆಯೊಂದೇ ಮಾರ್ಗವಾದ ಕಾರಣ, ಅದಕ್ಕೆ ಸೆಡ್ಡು ಹೊಡೆದು ಚೌಕಾಸಿಯ ದರದಲ್ಲಿ ಸಿಕ್ಕ ನಮ್ಮ ಏರ್ ಇಂಡಿಯಾದ ಟಿಕೆಟ್ಟು ಕೊಂಡಿದ್ದೆ. ಅದಕ್ಕೆಂದೇ ಇರುವ ನಿಗದಿತ ಟರ್ಮಿನಲ್ ತಲುಪಿ, ನನ್ನ ಕೌಂಟರನ್ನು ಹುಡುಕಿ ಹೊರಟೆ. ಪ್ರತಿ ಹತ್ತು ಕೌಂಟರುಗಳಲ್ಲಿ, ಎರಡರಲ್ಲಿ ಮಾತ್ರ ಸಿಬ್ಬಂದಿಗಳು ಕೆಲಸ ಮಾಡುತ್ತಿದ್ದರು. ಜಾಬ್ ಕಟ್ಸ್ ತಾರಸಿಯಿಂದ ಇಳಿಬಿದ್ದಿದ್ದ ಲೈಟುಗಳಲ್ಲಿ, ಕೆಲವು ದೀಪಗಳು ಮಾತ್ರ ಫುಕ ಫುಕನೆಂದು ಉರಿಯುತ್ತಿದ್ದವು.

ಲಂಡನ್ನಿನ ಶಾಪಗ್ರಸ್ತ ಚಳಿಗಾಲದ ಮಬ್ಬುಗತ್ತಲೆಯಲ್ಲಿ, ಬೆಳಕೇ ಇಲ್ಲದ ಕೌಂಟರುಗಳ ಈ ಕಳೆಗುಂದಿದ ವಾತಾವರಣ ನೋಡಿ ಮನಸ್ಸು ಶಂಕೆಗೆ ಬಿದ್ದಿತು. ಸಮವಸ್ತ್ರ ಧರಿಸಿ ಬಾಡಿಹೋದ ಹೂಗಳಂತೆ ಕಾಣುತ್ತಿದ್ದ ಸಿಬ್ಬಂದಿ, ಮ್ಲಾನವದನರಾಗಿ ಬರೇ ಕೈಸನ್ನೆ, ಬಾಯ್ಸನ್ನೆ ಮಾಡಿಕೊಂಡು ಜನರ ಬಳಿ ವ್ಯವಹರಿಸುತ್ತಿದ್ದ ರೀತಿ ಯಾವುದೋ ಪತ್ತೇದಾರಿ ಕಾದಂಬರಿಯ ಪುಟಗಳ ರಹಸ್ಯ ಜಗತ್ತನ್ನು ನೆನಪಿಗೆ ತಂದಿತು. ಅದಕ್ಕೆ ತಕ್ಕಂತೆ, ಜೋಲು ಮೋರೆ ಹೊತ್ತು ಸಾಲುಗಟ್ಟಿದ್ದ ಪ್ರಯಾಣಿಕರು, ಆಕಳಿಸುತ್ತ, ಕಣ್ಣು ಹೊಸಕುತ್ತ, ತಮ್ಮದೇ ಸಂಚುಗಳನ್ನು ಹೆಣೆಯುತ್ತ ನಿಂತಿದ್ದರು.

ಹಾಗೆಲ್ಲ ನಿರಾತಂಕವಾಗಿ ಲೈಟು ಉರಿಸಲು 'ಗೃಹಜ್ಯೋತಿ ಭಾಗ್ಯ' ಬಂದಿರುವುದು ಕರ್ನಾಟಕದ ಮನೆಗಳಲ್ಲಿ ಮಾತ್ರ, ಲಂಡನ್ನಿನ ವಿಮಾನ ನಿಲ್ದಾಣದಲ್ಲಲ್ಲ ಎಂದು ನನಗೆ ನಾನೇ ಸಮಾಧಾನ ಮಾಡಿಕೊಂಡೆ. ಈ ಕತ್ತಲಲ್ಲಿ, ಸದ್ದೇ ಇಲ್ಲದೆ ಸಾಂಕ್ರಾಮಿಕವಾಗಿ ಹರಡುತ್ತಿದ್ದ ಆಕಳಿಕೆ, ಸುಳಿವೇ ಕೊಡದಂತೆ ನನಗೂ ಹರಡಿಬಿಟ್ಟಿತು ಎಂದು ಅರಿವಾದದ್ದು ಆಕಳಿಸಿ ಮುಗಿಸಿದ ಮೇಲೆಯೇ.